ಉದಾಹರಣೆಗೆ ಮಾಸ್ತಿಯವರ 'ಸುಬ್ಬಣ್ಣ', ಅ.ನ.ಕೃ. ಅವರ 'ಸಂಧ್ಯಾರಾಗ', ತರಾಸು ಅವರ 'ಹಂಸಗೀತೆ', ಎಸ್.ಎಲ್. ಭೈರಪ್ಪನವರ 'ಮಂದ್ರ', ಶಿರೀಷ ಜೋಶಿಯವರ (ಪಂ. ಭೀಮಸೇನ ಜೋಶಿಯವರನ್ನು ಕುರಿತ) 'ಸೂರ್ಯದರ್ಶನ', ಹೀಗೆ. ಇವರಾರೂ ಸ್ವತಃ ಸಂಗೀತಗಾರರಲ್ಲ.

ಫ್ರೆಂಚ್ ಲೇಖಕ ರೋಮೆ ರೋಲಾ (1866–1944) ಪ್ರಸಿದ್ಧನಾಗಿರುವುದು 'ಜ್ಞಾನ್ ಕ್ರಿಸ್ತೋಫ್' ಎಂಬ ಹತ್ತು ಸಂಪುಟಗಳ ಬೃಹತ್ ಕಾದಂಬರಿಯಿಂದ. ಮೊದಲ ಸಂಪುಟ ಪ್ರಕಟವಾದದ್ದು 1904ರಲ್ಲಿ; ಕೊನೆಯ ಸಂಪುಟ 1913ರಲ್ಲಿ. ಇದು ಫ್ರಾನ್ಸಿನಲ್ಲಿ ನೆಲೆಸಿರುವ ಅದೇ ಹೆಸರಿನ ಜರ್ಮನ್–ಸಂಜಾತ ಪ್ರತಿಭಾವಂತ ಸಂಗೀತಗಾರನ ಜೀವನ ಮತ್ತು ಸಾಧನೆ ಕುರಿತದ್ದು. ಬಗೆಬಗೆಯ ಭೂದೃಶ್ಯಗಳ ಮೂಲಕ ಸಾಗುವ ಒಂದು ಬಹು ದೊಡ್ಡ ನದಿಯಂಥ ಈ ಕಾದಂಬರಿ ಮನುಷ್ಯಾನುಭವದ ವಿಸ್ತೃತ ದರ್ಶನವನ್ನು ಮಾಡಿಸುತ್ತದೆ.

ಒಬ್ಬ ಸಂಗೀತಗಾರನಷ್ಟೇ ಬರೆಯಬಹುದಾದ ಈ ಕಾದಂಬರಿ ರೋಮೆ ರೋಲಾಗೆ ಅಂತರರಾಷ್ಟ್ರೀಯ ಖ್ಯಾತಿಯನ್ನೂ ನೊಬೆಲ್ ಬಹುಮಾನವನ್ನೂ ತಂದುಕೊಟ್ಟಿತು. ಸ್ವತಃ ಸಂಗೀತಗಾರನಾಗಿದ್ದ ರೋಲಾ ಈ ಕೃತಿಯಲ್ಲಿ ಯೂರೋಪಿನ ದೆಬುಸ್ಸಿ, ರಿಚರ್ಡ್ ಸ್ಟ್ರಾವುಸ್‌ರಂಥ ಸಂಗೀತಗಾರರ ಪೀಳಿಗೆಯ, ಆ ಪೀಳಿಗೆಯ ಗಾಯಕರ, ಕಂಡಕ್ಟರುಗಳ, ಪ್ರೊಫೆಸರುಗಳ, ವಿಮರ್ಶಕರ ಮನಮುಟ್ಟುವಂಥ ಚಿತ್ರ ಬಿಡಿಸಿಡುತ್ತಾನೆ. ಕಥಾನಾಯಕ ಕ್ರಿಸ್ತೋಫ್‌ನ ಸಂಗೀತ, ಅದರಲ್ಲೂ ಮುಖ್ಯವಾಗಿ ಅದರ ಅಂತಿಮ ಹಂತ, ನಮ್ಮ ಕಾಲದ ಸಂಗೀತ ಪ್ರಯೋಗಗಳನ್ನು ಮುನ್ಸೂಚಿಸುವಂತಿದೆ.

ರೋಲಾನ ಬರವಣಿಗೆಯನ್ನು ಸಂಗೀತವೇ ಪ್ರಭಾವಿಸಿದೆಯೆನ್ನಬೇಕು. ಕ್ರಿಸ್ತೊಫ್, ಒಲಿವಿಯರ್, ಗ್ರಾತ್ಸಿಯಾ, ಇವರೇ ಪ್ರಮುಖ ಪಾತ್ರವಿಶೇಷಗಳಾಗಿರುವ ಈ ಕೃತಿಯನ್ನು ಒಂದು ವಿಸ್ತೃತ ಸಿಂಫೊನಿಗೆ ಹೋಲಿಸಬಹುದು. ಕೆಲವು ಕಡೆಗಳಲ್ಲಿ ಕಾದಂಬರಿ ನಿಜಕ್ಕೂ ಸಂಗೀತದಂತೆಯೇ ಕೇಳಿಸುತ್ತದೆ. ಉದಾಹರಣೆಗೆ ಒಲಿವಿಯರ್ ಮತ್ತು ಜಾಕೆಲಿನ್‌ರ ಪ್ರೇಮಪ್ರಕರಣ. ಇಲ್ಲಿ ರೋಲಾ ಆ ಇಬ್ಬರ ಮೊದಲ ಚುಂಬನದ ಮಾಧುರ್ಯವನ್ನು ಶಬ್ದಗಳಲ್ಲಿ ಹಿಡಿದುಕೊಡಲಾಗದೆ ಅದರದೊಂದು ಸಂಗೀತ ವಿನ್ಯಾಸವನ್ನೇ ರಚಿಸಿಬಿಟ್ಟಿದ್ದಾನೆ.

ಕಾದಂಬರಿಯ ಕೆಲವು ಭಾಗಗಳಲ್ಲಿ ತನ್ನ ಕಥನವನ್ನು ಕೈಬಿಡುವ ರೋಲಾ ಫ್ರಾನ್ಸಿನ ಸಾಂಸ್ಕೃತಿಕ ಕ್ಷೇತ್ರದ ಬಗ್ಗೆ, ಜರ್ಮನ್ ಸಂಗೀತದ ಬಗ್ಗೆ, ಸಮಾಜವಾದದ ಬಗ್ಗೆ, ಯಹೂದ್ಯರ ಪಾತ್ರದ ಬಗ್ಗೆ, ಅಷ್ಟೇಕೆ ಅವನಿಗೆ ಇಷ್ಟವಾದ ಪ್ರತಿಯೊಂದು ವಿಷಯದ ಬಗ್ಗೆ ಸುದೀರ್ಘ ವ್ಯಾಖ್ಯಾನಗಳನ್ನು ನೀಡುತ್ತಾನೆ. ಆದ್ದರಿಂದಲೇ ಕಾದಂಬರಿಯ ಕೆಲವು ಭಾಗಗಳು ಪ್ರಬಂಧದ ಧಾಟಿಯಲ್ಲಿವೆ. ಆದರೂ ವಿಚಾರಗಳಿಂದ, ವಸ್ತುವಿಗೆ ಅನುಗುಣವಾದ ಸಂಗೀತದಿಂದ ಸಂಪದ್ಭರಿತವಾಗಿರುವ ಈ ಕಾದಂಬರಿಯಲ್ಲಿ ದೃಶ್ಯವೈಭವವನ್ನು ಉದ್ದೀಪಿಸಬಲ್ಲ ಪ್ರತಿಮೆಗಳಿಗಿಂತ ಅಮೂರ್ತ ಸಂಗೀತದ ಶ್ರವಣಾನುಭವವೇ ಪ್ರಮುಖವಾಗಿದೆ.

'ಜ್ಞಾನ್–ಕ್ರಿಸ್ತೋಫ್'ನಲ್ಲಿ ಒಂದೆಡೆ ರೋಲಾ ಒಂದು ಫ್ರೆಂಚ್ ಅಪಾರ್ಟ್‌ಮೆಂಟನ್ನು ವರ್ಣಿಸುತ್ತಾನೆ. ಬೇರೆ ಬೇರೆ ಫ್ಲ್ಯಾಟುಗಳಲ್ಲಿ ವಾಸಿಸುವ ಅಲ್ಲಿನ ನಿವಾಸಿಗಳು ಬಗೆಬಗೆಯ ಸಾಮಾಜಿಕ ಕಟ್ಟುಪಾಡುಗಳಿಂದ, ಅಪನಂಬಿಕೆಯಿಂದ ಪರಸ್ಪರ ದೂರ ಸರಿದಿರುವವರು. ಕ್ರಮೇಣ ಅವರು ತಮ್ಮ ನಡುವೆ ಕಾದಂಬರಿಯ ವಾಗ್ಗೇಯಕಾರ ಜೀನ್ ಕ್ರಿಸ್ಟಾಫ್ ಇರುವುದನ್ನು ಗ್ರಹಿಸಿದ್ದೇ ಪರಸ್ಪರ ಒಂದಾಗುತ್ತಾರೆ.

ರೋಮೆ ರೋಲಾ ಫ್ರಾನ್ಸಿನ ಕ್ರಾಮೆಸಿ ಎಂಬ ಸಣ್ಣ ಹಳ್ಳಿಯಲ್ಲಿ ಹುಟ್ಟಿದವನು; ತನ್ನ ತಾಯಿಯ ಕಡೆಯಿಂದ ಸಂಗೀತಪ್ರೀತಿಯನ್ನು ಪಡೆದುಕೊಂಡವನು. ಪ್ಯಾರಿಸಿನ ಎಕೊಲ್ ನಾರ್ಮೇಲ್